ದಿನಾಂಕಃ **09.03.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಸಿ ಎನ್ ವಕೀಲರಿಂದಃ-

ಮೃತ ವಿಶ್ವನಾಥ್ ರವರು ನಿಮಗೆ ಏನೆಂದು ವಾಗ್ದಾನ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ಹಣವನ್ನು ಮಾಸಿಕ ಶೇ 18 ರಷ್ಟು ಬಡ್ಡಿಯನ್ನು ನೀಡುತ್ತೇನೆ ಎಂದು ಹೇಳಿರುತ್ತಾರೆ. ಅವರು ಎಷ್ಟು ತಿಂಗಳ ನಂತರ ಹಣ ಹಿಂದಿರುಗಿಸುತ್ತಾರೆ ಎಂದು ಹೇಳಿರುತ್ತಾರಾ ಎಂದರೆ ಸಾಕ್ಷಿ ಸಾಲ ಪಡೆದ 2 ತಿಂಗಳ ಒಳಗೆ ಸಾಲ ಹಿಂದಿರುಗಿಸುವುದಾಗಿ ಹೇಳಿರುತ್ತಾರೆ. ಬಡ್ಡಿ ವ್ಯವಹಾರವು ಪಂಚನಹಳ್ಳಿಯ ನಮ್ಮ ಮನೆಯಲ್ಲಿ ಅಗಿರುತ್ತದೆ. ಮಾತುಕತೆಯಾದ ಸಮಯದಲ್ಲಿ ವಿಶ್ವನಾಥ ರವರ ಸ್ನೇಹಿತರಾದ ಉಮಾಪತಿ ರವರು ಹಾಜರಿದ್ದರು. ಅವರು ಈಗ ಜೀವಂತವಾಗಿದ್ದಾರೆ ಎಂದರೆ ಸರಿ. ವಿಶ್ವನಾಥ ರವರು ಪಂಚಾಯ್ತಿ ಸದಸ್ಯರಾಗಿದ್ದಾಗ ಎನ್ ಆರ್ ಇ ಜಿ ಕೆಲಸಗಳನ್ನು ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ. ವಿಶ್ವನಾಥ ರವರು ಸ್ಥಿತಿಮಂತರಾಗಿದ್ದರು ಎಂದರೆ ಮಧ್ಯಮ ವರ್ಗದ ಕುಟುಂಬಸ್ಥರು ಎಂದು ನುಡಿಯುತ್ತಾರೆ. ಅವರಿಗೆ

8-10 ಎಕರೆ ಜಮೀನು ಇತ್ತು ಎಂದರೆ ಸಾಕ್ಷಿ ಪಾಳು ಜಮೀನು ಎಂದು ನುಡಿಯುತ್ತಾರೆ. ನಾನು ವಿಶ್ವನಾಥ ರವರು ಪರಿಚಯಸ್ಥರು ಎಂದರೆ ಸಾಕ್ಷಿ ಗ್ರಾಮಸ್ಥರು ಎಂದು ನುಡಿಯುತ್ತಾರೆ. ನಾನು ವಿಶ್ವನಾಥ ರವರು ಸ್ನೇಹಿತರು ಎಂದರೆ ಸರಿಯಲ್ಲ. ಮೃತ ವಿಶ್ವನಾಥ ರವರು ಪಂಚಾಯ್ತಿ ಸದಸ್ಯರಾದ ಕಾರಣ ಅವರಿಗೆ ಎನ್ ಆರ್ ಇ ಜಿ ಕೆಲಸಗಳನ್ನು ಮಾಡಿಸಲು ಕಾನೂನಿನ ತೊಡಕು ಇರುವುದರಿಂದ ನನ್ನ ಮೂಲಕ ಕೆಲಸ ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ. ವಿಶ್ವನಾಥ ರವರು ನನ್ನ ಮೂಲಕ ಇನ್ ಆರ್ ಇ ಜಿ ಕೆಲಸಗಳನ್ನು ಮಾಡಿಸುತ್ತಿದ್ದ ಕಾರಣ ನಮ್ಮ ನಡುವೆ ಉತ್ತಮ ಭಾಂದವ್ಯ ಇತ್ತು ಎಂದರೆ ಸರಿಯಲ್ಲ.

ನನ್ನ ಮತ್ತು ವಿಶ್ವನಾಥ ರವರ ಬಾಂಧವ್ಯ ಚೆನ್ನಾಗಿದ್ದರಿಂದ ಅವರ ದೌರ್ಬಲ್ಯ ನನಗೆ ಚೆನ್ನಾಗಿ ಗೊತ್ತಿತ್ತು ಎಂದರೆ ಸರಿಯಲ್ಲ. ವಿಶ್ವನಾಥ ರವರು ಆರ್ಥಿಕವಾಗಿ ಸ್ಥಿತಿವಂತರಾದ ಕಾರಣ ನನ್ನಿಂದ ಯಾವತ್ತೂ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಅವರಿಗೆ 8-10 ಎಕರೆ ತೆಂಗಿನ ತೋಟ ಇದ್ದ ಕಾರಣ ನನ್ನ ಬಳಿ ಸಾಲ ಪಡೆಯುವ ಸನ್ನಿವೇಶ ಉದ್ಭವಿಸುವುದಿಲ್ಲ ಎಂದರೆ ಸಾಕ್ಷಿ ಅವರಿಗೆ ತೋಟ ಇಲ್ಲಾ ಎಂದು ನುಡಿಯುತ್ತಾರೆ. ಮೃತ ವಿಶ್ವನಾಥ ರವರು ನನ್ನ ಮೂಲಕ ಎನ್ ಆರ್ ಇ ಜಿ ಕೆಲಸ ಮಾಡಿಸುತ್ತಿದ್ದ ಕಾರಣ ಅವರ ಯಾವುದೋ ಚಕ್ಕು ನನ್ನಬಳಿ ಸೇರಿಕೊಂಡಿದೆ ಎಂದರೆ ಸರಿಯಲ್ಲ. ಸದರಿ ಚೆಕ್ಕು ದುರುಪಯೋಗ ಪಡಿಸಿಕೊಂಡು ಅವರ ಮರಣಾನಂತರ ಅವರ ಹೆಂಡತಿ ಮಕ್ಕಳ ಮೇಲೆ ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ವಿಶ್ವನಾಥ ರವರ ಮರಣ ಕಾಲದಲ್ಲಿ ನಾನೇ ಅವರಿಗೆ ಎನ್ ಆರ್ ಇ ಜಿ ಕೆಲಸದ ಬಾಬ್ತು ರೂ. 5.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ಕೊಡಬೇಕಾಗಿತ್ತು ಎಂದರೆ ಸರಿಯಲ್ಲ. ಆ ಹಣವನ್ನು ಪಡೆಯಲು 1 ನೇ ಪ್ರತಿವಾದಿ ನನ್ನ ಬಳಿ ಬಂದಾಗ ಈ ಪ್ರಕರಣದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ರಾ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಸಹಿ ಹಾಗೂ ಒಕ್ಕಣೆ ವಿಶ್ವನಾಥ ರವರದ್ದು ಅಲ್ಲಾ ಎಂದರೆ ಸರಿಯಲ್ಲ. ವಿಶ್ವನಾಥ ರವರು ಆರ್ಥಿಕವಾಗಿ ಸಧೃಡರಾಗಿದ್ದರಿಂದ ನನ್ನಿಂದ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ವಿಶ್ವನಾಥ ರವರಿಗೆ ನಾನು ಬಡ್ಡಿಯ ಸಲುವಾಗಿ ಸಾಲ ನೀಡಿದ್ದೆ ಆದರೆ ಅದರ ಬಾಬ್ತು ದಾಖಲೆ ಬರೆಯಿಸಿಕೊಳ್ಳುತ್ತಿದ್ದೆ ಎಂದರೆ ಸಾಕ್ಷಿ ಅವರು ಚೆಕ್ಕನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ವಿಶ್ವನಾಥ ರವರು ನನ್ನ ಬಳಿ ಯಾವತ್ತೂ ಸಹ ನಾನು ದಾವೆಯಲ್ಲಿ ಹೇಳಿದಂತೆ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ಹೇಳಿರುವ ವ್ಯವಹಾರಕ್ಕೆ ಪ್ರತಿವಾದಿಗಳ ಸಹಿ ಅಥವಾ ಒಪ್ಪಿಗೆ ಪಡೆದಿಲ್ಲ ಎಂದರೆ ಸಾಕ್ಷಿ ಮೃತ ವಿಶ್ವನಾಥ ರವರು ನನ್ನ ಜೊತೆ ವ್ಯವಹಾರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ವಿಶ್ವನಾಥ ರವರು ಮರಣ ಹೊಂದಿದ ಒಂದೂವರೆ ವರ್ಷದ ನಂತರ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ ಕಾರಣ ದಾವಾ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕು ವಿಶ್ವನಾಥ ರವರದ್ದು ಅಲ್ಲಾ ಎಂದರೆ

ಸರಿಯಲ್ಲ. ಒಂದು ವೇಳೆ ಚೆಕ್ಕು ವಿಶ್ವನಾಥ ರವರದ್ದೆ ಆಗಿದ್ದರೆ ಸಂಬಂಧಪಟ್ಟ ಬ್ಯಾಂಕಿನಿಂದ ದಾಖಲೆ ಹಾಜರುಪಡಿಸುತ್ತಿದ್ದೆ ಎಂದರೆ ಸಾಕ್ಷಿ ವಿಶ್ವನಾಥ ರವರು ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ವಿಶ್ವನಾಥ ರವರು ಜೀವಂತವಾಗಿದ್ದಾಗ ಅವರ ಬಳಿ ಸಾಲವನ್ನು ವಾಪಸ್ಸು ನೀಡುವಂತೆ ಕೇಳಿದ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ನಾನು ಮುಖತಃ ಉಮಾಪತಿಯವರನ್ನು ಕರೆದುಕೊಂಡು ಹೋಗಿ ವಿಶ್ವನಾಥ ರವರ ಬಳಿ ಸಾಲ ವಾಪಸ್ಸು ಕೊಡುವಂತೆ ಕೇಳಿದ್ದೆ ಎಂದು ನುಡಿಯುತ್ತಾರೆ. ಉಮಾಪತಿರವರ ಸಮಕ್ಷಮ ವ್ಯವಹಾರ ಆದ ಬಗ್ಗೆ ನನ್ನ ವಾದಪತ್ರ ಹಾಗಾ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿ. ಉಮಾಪತಿಯವರನ್ನು ಸಾಕ್ಷಿ ಮಾಡಿಸಲು ನನಗೆ ತೊಂದರೆ ಇಲ್ಲಾ ಎಂದರೆ ಸಾಕ್ಷಿ ನ್ಯಾಯಾಲಯದಿಂದ ಸಮನ್ಸ ಹೋದಲ್ಲಿ ಅವರನ್ನು ವಿಚಾರಣೆ ಮಾಡಬಹುದು ಎಂದು ನುಡಿಯುತ್ತಾರೆ.

ನಿಪಿ-2 ರ ನೋಟಿಸು ಪ್ರತಿವಾದಿಗಳಿಗೆ ಖುದ್ದಾಗಿ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಗಳ ಊರು ಒಂದೇ ಆದ ಕಾರಣ ಅಂಚೆ ವಿತರಕನೊಂದಿಗೆ ಶಾಮೀಲಾಗಿ ನೋಟಿಸು ಜಾರಿಯಾಗದೇ ಇದ್ದರೂ ಸಹ ಸುಳ್ಳು ದಾಖಲೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನೋಟಿಸು ಜಾರಿಯಾಗಿದ್ದಲ್ಲಿ ಪ್ರತಿವಾದಿಗಳು ನನಗೆ ಉತ್ತರ ನೀಡುತ್ತಿದ್ದರು ಎಂದರೆ ಸಾಕ್ಷಿ ನೋಟಿಸು ಜಾರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.